OS 100/2019

PW.1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 13.11.2024

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ **9** ನೇ ಪ್ರತಿವಾದಿ ಪರವಾಗಿ ಶ್ರೀ. ಎಸ್. ಎ.ವಕೀಲರಿಂದಃ

ನಮ್ಮ ತಂದೆ ಹೆಸರು ಪಿಳ್ಳಪ್ಪ,ಅವರ ತಂದೆ ಹೆಸರು ಮುನಿಶಾಮಪ್ಪ. ಸದರಿ ಮುನಿಶಾಮಪ್ಪರವರು ಮೂಲತಃ ದೇವೇನಹಳ್ಳಿರವರು ಆಗಿದ್ದಾರೆ. ಮುನಿಶಾಮಪ್ಪರವರು ತಂದೆ ಹೆಸರು ರಾಮಯ್ಯ. ಮುನಿಶಾಮಪ್ಪರವರು ಯಾವಾಗ ತೀರಿಕೊಂಡರು ಎಂಬುದು ಗೊತ್ತಿಲ್ಲ. ಮುನಿಶಾಮಪ್ಪರವರ ಕುಟುಂಬಕ್ಕೆ ಸಂಬಂಧಪಟ್ಟಂತೆ ನಾನು ವಂಶವೃಕ್ಷ ಕೊಟ್ಟಿದ್ದೇನೆ. ಮುನಿಶಾಮಪ್ಪನಿಗೆ 5 ಜನ ಮಕ್ಕಳು, ಅವರುಗಳೆಂದರೆ ಮುನಿವೆಂಕಟಪ್ಪ, ನಾರಾಯಣಪ್ಪ, ರಾಮಯ್ಯ, ಪಿಳ್ಳಪ್ಪ ಮತ್ತು ಮುನಿಯಪ್ಪ ಆಗಿರುತ್ತಾರೆ. ಆ 5 ಜನ ಮಕ್ಕಳ ಪೈಕಿ ಯಾರು ಜೀವಂತ ಇಲ್ಲ. ಮುನಿಶಾಮಪ್ಪನ ಹೆಂಡತಿ ಹೆಸರು ಮುನಿಯಮ್ಮ ಆಕೆ ತೀರಿ ಕೊಂಡಿರುತ್ತಾಳೆ. ಮೇಲೆ ಹೇಳಿದ 5 ಜನ ಮಕ್ಕಳ ವಾರಿಸುದಾರರು ಬೇರೆ ಬೇರೆ ವಾಸವಿದ್ದಾರೆ. ಅವರು ಆ ರೀತಿ ಬೇರೆ ಬೇರೆ ವಾಸ ಎಷ್ಟು ವರ್ಷಗಳಿಂದ ಇರುತ್ತಾರೆ ಎಂಬುದು ನಿಖರವಾಗಿ ಗೊತ್ತಿಲ್ಲ. ಮೇಲೆ ಹೇಳಿದ ಪಿಳ್ಳಪ್ಪ ನನ್ನ ತಂದೆಯಾಗಿರುತ್ತಾರೆ. ಮೇಲೆ ಹೇಳಿದ 5 ಜನ ಮಕ್ಕಳ ವಾರಿಸುದಾರರು ದೇವೇನಹಳ್ಳಿಯಲ್ಲಿ ವಾಸವಿದ್ದಾರೆ. ಆ ಮೇಲೆ ಹೇಳಿದ 5 ಜನ ಮಕ್ಕಳ ವಾರಸುದಾರರಿಗೆ ಬೇರೆ ಬೇರೆ ವಾಸದ ಮನೆಗಳು ಇರುತ್ತವೆ. ಆ ವಾಸದ ಮನೆಗಳು ನಮ್ಮ ತಾತಾ ಮತ್ತು ಮುತ್ತಾತ ಸಂಪಾದನೆ ಮಾಡಿರುತ್ತಾರೆ. ಮುನಿಶಾಮಪ್ಪ ಮತ್ತು ಆತನ ತಂದೆ ರಾಮಯ್ಯರವರ ಆಸ್ತಿಗಳನ್ನು ಅವರ ವಾರಸುದಾರರು ವಿಭಾಗ ಮಾಡಿಕೊಂಡಿದ್ದಾರೆಯೇ ಎಂದರೆ ಸಾಕ್ಷಿ ಕೆಲವು ಮಾಡಿಕೊಂಡಿದ್ದಾರೆ ಮತ್ತು ಕೆಲವು ಮಾಡಿಕೊಂಡಿಲ್ಲ. ಭಾಗವಾಗಿರುವ ಜಮೀನುಗಳು ಮತ್ತು ಮನೆಗಳ ಸಂಖ್ಯೆ ನನಗೆ ಈಗ ಹೇಳಲು ಆಗುವುದಿಲ್ಲ. ಅದೇ ರೀತಿ ಭಾಗವಾಗಿರುವ ಸೊತ್ತುಗಳ ವಿಸ್ತೀರ್ಣ ಕೂಡ ನನಗೆ ಹೇಳಲು ಈಗ ಆಗುವುದಿಲ್ಲ.

ನನ್ನ ತಂದೆ ಪಿಳ್ಳಪ್ಪರವರಿಗೆ ಮೇಲೆ ಹೇಳಿದಂತೆ ಭಾಗವಾಗಿರುವ ಸೊತ್ತಿನಲ್ಲಿ 2 ಎಕರೆ ಬಂದಿರುತ್ತದೆ. ಪಿಳ್ಳಪ್ಪರವರಿಗೆ ಬಂದ ಸೊತ್ತಿನ ಸರ್ವೆ ನಂ. 57, ಸರ್ವೆ ನಂ. 33, ಸರ್ವೆ ನಂ. 39 ಮತ್ತು ಸರ್ವೆ ನಂ. 40 ಗಳ ಆಗಿರುತ್ತವೆ. ನನ್ನ ತಂದೆಯ ಸಹೋದರರಿಗೆ ನಮ್ಮ ತಂದೆಗೆ ಬಂದ ಭಾಗದ ವಿಸ್ತೀರ್ಣಕ್ಕಿಂತ ಹೆಚ್ಚು ಹೋಗಿರುತ್ತದೆ. ಆ ರೀತಿ ವಿಭಾಗವು ನ್ಯಾಯಾಲಯದ ಡಿಕ್ರಿಯಂತೆ 2007 ರಲ್ಲಿ ಆಗಿದೆ. ಆ ರೀತಿ ನ್ಯಾಯಾಲಯದಲ್ಲಿ ಡಿಕ್ರಿಯಾಗುವಾಗ ಸ ನಂ. 42 ಜಮೀನು ಮಾತ್ರ ಭಾಗ ಆಗದೆ ಉಳಿದಿತ್ತು . ಆ ಸರ್ವೆ ನಂಬರ್ ನಲ್ಲಿ ಜಂಟಿ ಹೆಸರು ಇತ್ತು, ಹಾಗಾಗಿ ಅದು ನ್ಯಾಯಾಲಯದಲ್ಲಿ ಭಾಗ ಮಾಡಿಕೊಂಡಿಲ್ಲ. ಚಿಂತಾಮಣಿ ನ್ಯಾಯಾಲಯದಲ್ಲಿ ಡಿಕ್ರಿಯಾಗಿತ್ತು, ಅದರ ದಾಖಲೆಯನ್ನು ಕೊಟ್ಟಿದ್ದೇನೆ. ಆ ದಾವೆಯನ್ನು ನನ್ನ ದೊಡ್ಡಪ್ಪ ನಾರಾಯಣಪ್ಪರವರು ಹಾಕಿದ್ದರು. ಆ ದಾವೆಯ ವಿಚಾರಣೆಯಲ್ಲಿ ಸ. ನಂ. 42 ಜಮೀನು ನಮ್ಮ ಕುಟುಂಬಕ್ಕೆ ಇದ್ದು ಮತ್ತು ಅದು ಜಂಟಿ ಹೆಸರಿನಲ್ಲಿರುವ ಕುರಿತು ವಿಚಾರವನ್ನು ಹೇಳಿಲ್ಲ. ಆ ದಾವೆಯಲ್ಲಿ ನನ್ನ ತಂದೆ ಪಕ್ಷಗಾರ, ನಾನು ಇರಲಿಲ್ಲ. ನನ್ನ ತಂದೆ 2020 ರಲ್ಲಿ ತೀರಿಕೊಂಡಿದ್ದಾರೆ.

ಮುನಿಶಾಮಪ್ಪನ ಮಗನಾದ ಮುನಿಯಪ್ಪರವರಿಗೆ ಮಕ್ಕಳು ಇರಲಿಲ್ಲ. ಮುನಿಯಪ್ಪರವರ ಹೆಂಡತಿ ಹೆಸರು ನಾರಾಯಣಮ್ಮ, ಅವರು ಈಗ ಪ್ರತಿವಾದಿ 9 ಆಗಿದ್ದಾರೆ. ಆಕೆ ದೇವೇನಹಳ್ಳಿಯಲ್ಲಿ ವಾಸವಾಗಿದ್ದಾರೆ. ಪ್ರತಿವಾದಿ 9 ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿದ್ದು, ನನಗೆ ಪರಿಚಯ ಮತ್ತು ವಿಶ್ವಾಸದಿಂದ ಇರುತ್ತಾರೆ. ನಾರಾಯಣಮ್ಮರವರ ತವರು ಮನೆ ಸೂಲಿಬೆಲೆ ಬಳಿ ಅರಸನಹಳ್ಳಿ ಗ್ರಾಮವಾಗಿದೆ. ಅವರ ತಂದೆಯ ಹೆಸರು ಮುನಿಶಾಮಪ್ಪ ಆಗಿದೆ. ಆ ಮುನಿಶಾಮಪ್ಪ ತೀರಿಕೊಂಡು ಎಷ್ಟು ವರ್ಷವಾಗಿದೆ ಎಂಬುದು ಗೊತ್ತಿಲ್ಲ.

ಸರ್ವೆ ನಂ. 42 ಜಮೀನು ಮುನಿಶಾಮಪ್ಪ ಮತ್ತು ಮುನಿನಂಜಪ್ಪ ಎಂಬುವವರ ಹೆಸರಿನಲ್ಲಿ ಜಂಟಿಯಲ್ಲಿತ್ತು. ಸದರಿ ಇಬ್ಬರು ಪರಸ್ಪರ ಸಂಬಂಧಿಕರು ಅಲ್ಲ. ಆ ಜಮೀನು ಸರಕಾರದಿಂದ ಇಬ್ಬರಿಗೂ ಮಂಜೂರಾಗಿರುತ್ತದೆ. ಯಾವ ವರ್ಷದಲ್ಲಿ ಆಗಿತ್ತು ಎಂಬುದು ಗೊತ್ತಿಲ್ಲ, ಆ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ಮುನಿನಂಜಪ್ಪರವರು ತೀರಿಕೊಂಡಿದ್ದಾರೆ, ಅವರು ಯಾವಾಗ ತೀರಿಕೊಂಡಿದ್ದಾರೆ ಎಂಬುದು ಗೊತ್ತಿಲ್ಲ. ಮೇಲೆ ಹೇಳಿದ ಸರ್ವೆ ನಂ. 42 ರಲ್ಲಿ ಮುನಿಶಾಮಪ್ಪ ಎಂಬುವವರ ತಂದೆ ಹೆಸರು ರಾಮಯ್ಯ ಎಂದು ಆಗಿತ್ತು. ಸಾಕ್ಷಿ ನಿಪಿ 37 ದಾಖಲೆಯನ್ನು ನೋಡಿ ಅದರಲ್ಲಿ ಮುನಿಶಾಮಪ್ಪ ಬಿನ್ ರಾಮಣ್ಣ ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ಆ ದಾಖಲೆಯಲ್ಲಿ ಸರ್ವೆ ನಂ. 25/4 ವಿಸ್ತೀರ್ಣ 16 ಗುಂಟೆ ಎಂದು ಇದೆ. ಸರ್ವೆ ನಂ. 25/4 ವಿಸ್ತಿರ್ಣ 16 ಗುಂಟೆ ಜಮೀನು ಈ ದಾವೆಯಲ್ಲಿ ಶೆಡ್ಯೂಲ್ ನಲ್ಲಿದೆ. ನಿಪಿ 37 ರಲ್ಲಿ ಸ. ನಂ. 42 ಪ್ರಸ್ತಾಪನೆ ಇಲ್ಲ.

ಮೇಲೆ ಹೇಳಿದ ಹಳೇ ದಾವೆ ಸಂಖ್ಯೆ ಓ. ಎಸ್. ನಂ. 17/2007 ಆಗಿದ್ದು, ಆ ದಾವೆಯಲ್ಲಿ ಸರ್ವೆ ನಂ. 42 ಜಮೀನನ್ನು ಸೇರಿಸದೇ ಇರುವ ವಿಚಾರ ಮತ್ತು ಕಾರಣವನ್ನು ಈ ದಾವೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 42 ಈಗ 5 ಪೊಡಿಯಾಗಿದೆ, ಅದರಂತೆ ಪ್ರತಿವಾದಿ 9 ನಾರಾಯಣಮ್ಮ ರವರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಬರುತ್ತಿದೆ ಎಂಬುದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪೊಡಿಯಾಗಿ ವೆಂಕಟೇಶಪ್ಪ (ಪ್ರತಿವಾದಿ 15), ಅಜಯ್ ಎಂಬುವವರ ಹೆಸರಿನಲ್ಲಿ ಬರುತ್ತಿದೆ. ಸ. ನಂ. 42 ರಲ್ಲಿ ಮುನಿನಂಜಪ್ಪರವರ ವಾರಿಸುದಾರರು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ಸ. ನಂ. 42 ರಲ್ಲಿ ಏನೇನು ಪೊಡಿಯಾಗಿದೆ ಎಂದು

ನಾನು ತಿಳಿದುಕೊಂಡಿಲ್ಲ. ಸ. ನಂ. 42 ರಲ್ಲಿ ಮುನಿನಂಜಪ್ಪರವರ ವಾರಿಸುದಾರರು ತಮ್ಮ ಹಿಸ್ಸೆಯ ಭಾಗವನ್ನು ಮಾರಾಟ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶಿಡ್ಲಘಟ್ಟ.